**ಸಾಕ್ಷಿಯನ್ನು ದಿಃ 03.09.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 15 ನೇ ಪ್ರತಿವಾದಿ ಪರ ಶ್ರೀ ಸಿ.ಎಲ್.ಎಂ. ವಕೀಲರ ಪರವಾಗಿ ಶ್ರೀ ಎಂ.ಎಸ್ ವಕೀಲರಿಂದಃ-**

ನನ್ನ ತಾಯಿಗೆ ಜಮೀನು ಬರಬೇಕು ಎಂದು ಈ ದಾವೆಯನ್ನು ಮಾಡಿರುತ್ತೇವೆ. ಈ ದಾವೆ ಮಾಡಲು ಮಾಹಿತಿಯನ್ನು ನನ್ನ ತಾಯಿಯೇ ಹೇಳಿರುತ್ತಾರೆ. ಸರ್ವೆ ನಂ. 178 ರ ಮೇಲೆ ಈ ಕೇಸ್ ಹಾಕಿರುತ್ತೇವೆ. ಈ ದಾವೆಯನ್ನು ಹುಚ್ಚಮ್ಮ, ಹುಚ್ಚನಾಯಕ ಮತ್ತು ಕೆಂಪನಾಯಕ ರವರ ನಡುವೆ ಈ ಕೇಸ್ ಹಾಕಿರುತ್ತದೆ. ಸದರಿ ಹುಚ್ಚಮ್ಮ ನನ್ನ ಅತ್ತೆ, ಹುಚ್ಚನಾಯಕ ಮತ್ತು ಕೆಂಪನಾಯಕ ಮಾವಂದಿರು. ದಾವಾ ಆಸ್ತಿ ನಮ್ಮ ತಾಯಿಯ ತಂದೆಗೆ ಸೇರಿದ್ದಿರುತ್ತದೆ. ನಮ್ಮ ತಾತ ಹುಚ್ಚನಾಯಕನಿಗೆ ಮೂವರು ಜನ ಮಕ್ಕಳು. ಅವರುಗಳೆಂದರೆ ಹುಚ್ಚಮ್ಮ ಹುಚ್ಚನಾಯಕ ಮತ್ತು ಕೆಂಪನಾಯಕ ಆಗಿರುತ್ತಾರೆ. ನನ್ನ ತಾಯಿಯ ವಯಸ್ಸು ಈಗೆ 85 ಆಗಿರಬಹುದು. ನಾನು ನನ್ನ ತಾಯಿಯ ಪರವಾಗಿ ಸಾಕ್ಷಿ ಹೇಳಲು ಬಂದಿರುತ್ತೇನೆ. ನನಗಿಂತಲೂ ನನ್ನ ತಾಯಿಗೆ ಈ ಕೇಸ್ ನ ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸರಿ. ನನ್ನ ತಾಯಿ ಈ ಕೇಸ್ ಅನ್ನು ನನಗೆ ನಡೆಸಲು ಆಗುವುದಿಲ್ಲ ಎಂದು ನನಗೆ ನಡೆಸುವಂತೆ ಹೇಳಿರುತ್ತಾರೆ. ಈ ಕೇಸ್ ಅನ್ನು ನನಗೆ ನಡೆಸಲು ಆಗುವುದಿಲ್ಲ ಎಂದು ನನಗೆ ಅಧಿಕಾರ ಪತ್ರವನ್ನು ಕೊಟ್ಟಿರುತ್ತಾರೆ. ನನ್ನ ತಾಯಿಗೆ ಸಾಕ್ಷಿ ಹೇಳಲು ಏನು ತೊಂದರೆ ಇತ್ತು ಎಂದರೆ ಅವರು ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲ ಎನ್ನುತ್ತಾರೆ. ನನ್ನ ತಾಯಿ ಯಾವ ಆಧಾರದ ಮೇಲೆ ಈ ಕೇಸ್ ಅನ್ನು ನಡೆಸಲು ಅಧಿಕಾರ ಕೊಟ್ಟದ್ದು ಎಂದರೆ ಜಮೀನು ಆಧಾರದ ಮೇಲೆ ಕೇಸ್ ನಡೆಸಲು ಸಾಕ್ಷಿ ಆಗಿ ಅಧಿಕಾರ ಕೊಟ್ಟಿರುತ್ತಾರೆ. ನನ್ನ ತಾಯಿಯ ಬದಲಾಗಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿರುತ್ತೇನೆ. ನನ್ನ ತಾಯಿಗೆ ಆರೋಗ್ಯ ಸರಿ ಇಲ್ಲ ಎಂದು ನ್ಯಾಯಾಲಯಕ್ಕೆ ಯಾವುದೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

ಈ ಕೇಸ್ ನಲ್ಲಿ ಮಂಜುನಾಥ ರವರು ನನ್ನ ಮಾವನರ ಜಮೀನನ್ನು ನಮಗೆ ಗೊತ್ತಿಲ್ಲದ ಹಾಗೆ ಖರೀದಿ ಮಾಡಿದ ಕಾರಣ ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇವೆ. ತಾಯಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಉದ್ದೇಶ ಪೂರ್ವಕವಾಗಿ ನಾನು ನ್ಯಾಯಾಲಯಕ್ಕೆ ಬಂದು

ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ಬೇಕಾದರೆ ತಾಯಿಯನ್ನು ಸಹ ಕರೆಸಿ ಸಾಕ್ಷಿ ಮಾಡಿಸುತ್ತೇನೆ ಎನ್ನುತ್ತಾರೆ. ತಾಯಿಯ ಹುಟ್ಟಿದ ಕೆಂಪನಾಯಕ ಮತ್ತು ಹುಚ್ಚನಾಯಕ ರವರ ಹೆಸರಿನಲ್ಲಿ ಐಟಂ ನಂ. 1 ಮತ್ತು 2 ಸ್ವತ್ತಿನ ಖಾತೆ ಇರುತ್ತದೆ ಎಂದರೆ ಸರಿ. ಕೆಂಪನಾಯಕ ಮತ್ತು ಹುಚ್ಚನಾಯಕ ಎಂಬುವವರ ಹೆಸರಿಗೆ ಯಾವ ಆಧಾರದ ಮೇಲೆ ಖಾತೆ ಆಯಿತು ಎಂದು ನಮಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.